ಅ) ಈ ಯೋಜನೆಯಂತೆ ನೀರು ಸಂಗ್ರಹಿಸುವ ಹಾಗೂ ವಿದ್ಯುತ್ ಉತ್ಪಾದನೆ ಮಾಡುವ ಪ್ರಮಾಣವೆಷ್ಟು,

ಇ) ಸದರಿ ನಿರ್ಮಾಣ ಕಾರ್ಯಕ್ಕಾಗಿ ಅಂದಾಜು ಮಾಡಿರುವ ವೆಚ್ಚವೆಷ್ಟು, ಹಾಗೂ ಎಂದಿನಿಂದ ಪ್ರಾರಂಭಿಸಲಾಗುವುದು

ಶ್ರೀ ಜೆ. ಹೆಚ್. ಪಟೇಲ್ (ಭಾರಿ, ಮಾಧ್ಯಮ ಕೈಗಾರಿಕೆಗಳು ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು). —

ಅ) ಶರಾವತಿ ಟೇಲ್‌ರೇಸ್ ಯೋಜನೆಯಲ್ಲಿ ಮುಳುಗಡೆಯಾಗಲಿರುವ ಜಮೀನಿನ ವಿಸ್ತೀರ್ಣ ೫೬೬ ಹೆಕ್ಟೇರುಗಳು, ಯಾವುದೇ ಖಾಸಗೀ ಪ್ರದೇಶ ಮುಳುಗಡೆಯಾಗುವುದಿಲ್ಲ.

ಆ) ಜಲಾಶಯದಲ್ಲಿ ನೀರು ಸಂಗ್ರಹವಾಗುವ ಪ್ರಮಾಣ ೧೨೬ ಮಿಲಿಯನ್ ಕ್ಯೂಬಿಕ್ ಮೀಟರ್‌ಗಳು ವರ್ಷಕ್ಕೆ ೬೧೯ ಮಿಲಿಯನ್ ಯೂನಿಟ್‌ಗಳು ವಿದ್ಯುತ್ ಉತ್ಪಾದನೆ ಮಾಡಬಹುದಾದ ಪ್ರತಿಯೊಂದು ೬೦ ಮೆಗಾವ್ಯಾಟ್ ಸಾಮರ್ಥ್ಯದ ನಾಲ್ಕು ಘಟಕಗಳು ಇರುತ್ತವೆ.

ಇ) ಈ ಯೋಜನೆಯ ಅಂದಾಜು ಮೊತ್ತ ರೂಪಾಯಿ ೨೧೨ ಕೋಟಿಗಳು, ಡೈವರ್ಷನ್ ಹಾಗೂ ಉಳಿದ ಅವಶ್ಯಕ ಪೂರ್ವಭಾವಿ ಕೆಲಸಗಳನ್ನು ಈ ವರ್ಷದಲ್ಲೇ ಪ್ರಾರಂಭಿಸುವ ನಿರೀಕ್ಷೆಯಿದೆ.

ಅರಣ್ಯ ಇಲಾಖೆಯ ಭೂಮಿಯಲ್ಲಿ ಕೃಷಿ ಮಾಡುವುದು

೭೨೩. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಅರಣ್ಯ ಇಲಾಖೆಯು ತನ್ನದೆಂದು ತಿಳಿದಿರುವ ಸುಮಾರು ೩೦೦ ಎಕರೆ ಪ್ರದೇಶದಲ್ಲಿ ಹಲವಾರು ವರ್ಷಗಳಿಂದ ರೈತರು ಕೃಷಿಮಾಡಿ ಕಟಾವು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಅರಣ್ಯಾಧಿಕಾರಿಗಳಿಗೂ ಮತ್ತು ರೈತರಿಗೂ ಈ ಬಗ್ಗೆ ಒಂದೇ ಸಮನಾಗಿ ಘರ್ಷಣೆ ನಡೆಯುತ್ತಿರುವುದು ಸರ್ಕಾರಕ್ಕೆ ತಿಳಿದಿದೆಯೇ ?

ಇ) ಈ ಬಗ್ಗೆ ರೈತರಿಗೆ ನ್ಯಾಯ ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಜಿ. ಎಸ್. ಬಾಗಲಕೋಟಿ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಹೌದು

ಆ) ಹೌದು

ಇ) ಅರಣ್ಯ ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳಿಂದ ಜಂಟೀ ಸರ್ವೆಯೊಂದು ನಡೆದಿದ್ದು ಈಗಾಗಲೇ ಗುರುತಿಸಲಾದ ಕಾದಿಟ್ಟ ಅರಣ್ಯ ಪ್ರದೇಶವನ್ನು ಗುರುತಿಸಿದ ನಂತರ ಈಗಾಗಲೇ ಕೃಷಿ ಮಾಡುತ್ತಿರುವ ಪ್ರದೇಶವು ಕಾದಿಟ್ಟ ಅರಣ್ಯ ಪ್ರದೇಶದ ಹೊರಭಾಗದಲ್ಲಿದ್ದರೆ ಈ ವಿವಾದವನ್ನು ನಿತ್ಯರ್ಥಗೊಳಿಸಲಾಗುವುದು.

ಪಶು ಚಿಕಿತ್ಸಾಲಯದ ಬಗ್ಗೆ

೭೩೬. ಶ್ರೀ ಕೆ. ಬಿ. ಶಾಣಪ್ಪ (ಶಹಾಬಾದ್).— ಮಾನ್ಯ ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿತ್ತಾಪುರ ತಾಲ್ಲೂಕಿನಲ್ಲಿ ಕೊಲ್ಲೂರು ಗ್ರಾಮವು ಅತೀ ದೊಡ್ಡ ಗ್ರಾಮವಾಗಿದ್ದುದರಿಂದ ಪಶು ಚಿಕಿತ್ಸಾಲಯವು ಅವಶ್ಯಕವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಸದರಿ ಗ್ರಾಮದ ಜನತೆಯು ಪಶು ಚಿಕಿತ್ಸಾಲಯಕ್ಕೆ ಸರ್ಕಾರದವರಿಗೆ ಬೇಡಿಕೆಯಿನ್ನೇನಾದರೂ ಇಟ್ಟಿರುವರೆ ?

ಇ) ಹಾಗಿದ್ದಲ್ಲಿ, ಸರ್ಕಾರದವರು ಕೂಡಲೇ ಪಶು ಚಿಕಿತ್ಸಾಲಯ ತೆರೆಯಲು ಕ್ರಮ ಕೈಗೊಳ್ಳುವರೆ ಹಾಗೂ ಯಾವಾಗಿನಿಂದ ತೆರೆಯಲಾಗುವುದು ?

ಶ್ರೀ ಸಿದ್ದರಾಮಯ್ಯ (ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆಗಳ ಸಚಿವರು).—

ಅ) ಬಂದಿದೆ.

ಆ) ಬಂದಿದೆ.

ಇ) ದಿನಾಂಕ ೧-೪-೧೯೮೭ರಿಂದ ಜಿಲ್ಲಾ ಪರಿಷತ್ತುಗಳು ಅಸ್ತಿತ್ವಕ್ಕೆ ಬಂದಿರುವುದರಿಂದ ಈ ಬಗ್ಗೆ ಗುಲ್ಬರ್ಗಾ ಜಿಲ್ಲಾ ಪರಿಷತ್ತಿನವರೇ ಸೂಕ್ತ ಕ್ರಮ ಕೈಗೊಳ್ಳಬೇಕಾಗುತ್ತದೆ.

ರಾಜ್ಯದ ವಿದ್ಯುಚ್ಛಕ್ತಿ ಉತ್ಪಾದನೆ ಬಗ್ಗೆ

೬೧೫. ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಭಾರೀ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವಿದ್ಯುಚ್ಛಕ್ತಿ ಆಧಾರಿತ ಕೈಗಾರಿಕೆಗಳು ಮುಚ್ಚಿ ಹೋಗಬಹುದೆಂದು ಸಂಬಂಧಪಟ್ಟ ಮಂತ್ರಿಗಳು ಹೇಳಿರುವುದು ನಿಜವೆ ?

ಆ) ಮಳೆ ಪ್ರಮಾಣವು ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿರುವುದರಿಂದ ನೀರಿನಿಂದ ವಿದ್ಯುಚ್ಛಕ್ತಿ ಉತ್ಪಾದನೆಯನ್ನು ಹೆಚ್ಚು ಮಾಡುವ ಸಾಧ್ಯತೆಗಳೆಯೇ, ಈ ನಿಟ್ಟಿನಲ್ಲಿ ಸರ್ಕಾರದ ಯೋಜನೆಗಳೇನು ?

ಇ) ವಿದ್ಯುಚ್ಛಕ್ತಿ ಕೊರತೆಯನ್ನು ಸರಿ ತೂಗಿಸಲು 'ಸೂಪರ್ ಥರ್ಮಲ್ ಪ್ಲಾಂಟ್'ಗಳ ಸ್ಥಾಪನೆ ಅನಿವಾರ್ಯ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಸೂಪರ್ ಥರ್ಮಲ್ ಸ್ಥಾಂಟ್ (ಅನುಸ್ಥಾವರ) ಗಳ ಶೀಘ್ರ ಸ್ಥಾಪನೆಗೆ ಸರ್ಕಾರದವರ ಪ್ರಸ್ತುತ ಯೋಜನೆಗಳಾವುವು ಹಾಗೂ ಯೋಜಿಸಿರುವ ಯೋಜನೆಗಳಾವುವು ?

ಉ) ವಿಜಯನಗರ ಉಕ್ಕು ಕಾರ್ಖಾನೆಗಾಗಿ ಸ್ವಾಧೀನ ಪಡಿಸಿಕೊಂಡರೂ ಒಂದು ಭಾಗದಲ್ಲಿ ಅಥವಾ ಹತ್ತಿರದಲ್ಲಿ ಒಂದು 'ಸೂಪರ್ ಥರ್ಮಲ್ ಪ್ಲಾಂಟ್' ನ್ನು ಸ್ಥಾಪನೆ ಮಾಡುವ ಎಲ್ಲಾ ಅನುಕೂಲಗಳಿಗೆಯೆಂದು ಅಖಿಲ ಭಾರತ ವಿಜ್ಞಾನಿಗಳ ಸಮ್ಮೇಳನದಲ್ಲಿ ಚರ್ಚೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಊ) ಹಾಗಿಲ್ಲದಿದ್ದಲ್ಲಿ ಅದರ ವರದಿಯನ್ನು ತರಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು) —

ಅ) ವಿದ್ಯುತ್ತಿನ ಅತಿ ತೀವ್ರ ಕೊರತೆಯುಂಟಾದ ಪಕ್ಷದಲ್ಲಿ ವಿದ್ಯುತ್ ಆಧಾರಿತ ಕೆಲವು ಕೈಗಾರಿಕೆಗಳನ್ನು ತಾತ್ಕಾಲಿಕವಾಗಿ ಮುಚ್ಚುವುದು ಅನಿವಾರ್ಯವಾಗಬಹುದು,

ಆ) ರಾಜ್ಯದಲ್ಲಿ ಈಗ ಕಾರ್ಯನಿರತವಾಗಿರುವ ಜಲವಿದ್ಯುತ್ ಯೋಜನೆಗಳಲ್ಲದೆ ಇನ್ನೂ ಹಲವು ಜಲವಿದ್ಯುತ್ ಯೋಜನೆಗಳ ನಿರ್ಮಾಣ ಸಾಧ್ಯವಿದೆ. ವಿದ್ಯುತ್ ನಿಗಮದವರು ಈಗ ಹಾಲಿ ನಡೆಯುತ್ತಿರುವ ವರಾಹಿ, ಘಟಪ್ರಭಾ ಯೋಜನೆಗಳಲ್ಲದೆ ಕಾಳೀನದಿ ಏನೇ ಹಂತ ಶರಾವತಿ ಟೇಲ್‌ರೇರ್, ಶಿವನಸಮುದ್ರ ಯೋಜನೆಗಳನ್ನು ತೆಗೆದುಕೊಳ್ಳುವ ಪ್ರಸ್ತಾಪ ಇದೆ.

ಇ) ಬಂದಿದೆ.

ಈ) ಮಂಗಳೂರಿನಲ್ಲಿ ಒಂದು ಮಲ್ಟಿ ಫ್ಯೂಯಲ್ ಥರ್ಮಲ್ ಘಟಕವನ್ನು ಸ್ಥಾಪಿಸುವ ಪ್ರಸ್ತಾಪನೆ ಪರಿಶೀಲನೆಯಲ್ಲಿದೆ. ಕೈಗಾದಲ್ಲಿ ಅಣುಸ್ಥಾವರ ಕೇಂದ್ರ ಸರ್ಕಾರದಿಂದ ಸ್ಥಾಪನೆಯಲ್ಲಿದೆ,

ಉ) ಮತ್ತು ಊ) ಹೊಸಪೇಟೆ-ಬಳ್ಳಾರಿ ವಲಯದಲ್ಲಿ ಒಂದು ಸೂಪರ್ ಥರ್ಮಲ್ ಪವರ್ ಸ್ಟೇಷನನ್ನು ಸ್ಥಾಪಿಸುವ ಪ್ರಸ್ತಾಪನೆ ಪರಿಶೀಲನೆಯಲ್ಲಿದೆ.